ಶ್ರೀ ಎಂ. ರಾಮಪ್ಪ.— ಬರುತ್ತದೆ ಅಂದರೆ ಮಂತ್ರಿಗಳು ಇಲ್ಲ, ನೀವು ಸುಮ್ಮನೆ ತೆಗೆದು ಕೊಳ್ಳುತ್ತೀರಿ. ಆನ್ಸರ್ ಕೊಡುವುದಕ್ಕೆ ಯಾರೂ ಇಲ್ಲ, ೩-೪ ದಿನ ಆಯಿತು.ನಮ್ಮ ೩೩೪ರ ವಿಷಯಗಳ ಬಗ್ಗೆ ನಮಗೆ ಏನೂ ಉತ್ತರ ಕೊಟ್ಟಿಲ್ಲ.

ಉಪಾಧ್ಯಕ್ಷರು.— ದಯವಿಟ್ಟು ತಾವು ಕುಳಿತುಕೊಳ್ಳಿ ಉತ್ತರ ಬರುತ್ತದೆ.

ಶ್ರೀ ಗೋಪಾಲ ಮಂಕಂದ ಕಾನಡೆ.— ಉತ್ತರ ಬರುವುದಿಲ್ಲ, ತರಿಸಿ ಕೊಡಿ,

ಉಪಾಧ್ಯಕ್ಷರು.— ತಾವು ಕೇಳಿದ ಪ್ರಶ್ನೆಯನ್ನು ಅಧ್ಯಕ್ಷರು ಪರಿಶೀಲನೆ ಮಾಡುತ್ತಿದ್ದಾರೆ, ನಂತರ ಹೇಳುತ್ತೇನೆ, ನೀವು ವಿಷಯವನ್ನು ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಎಂ. ರಾಮಪ್ಪ.— ನಾವು ಉತ್ತರಕ್ಕಾಗಿ ಒತ್ತಾಯ ಮಾಡಬೇಕಾಗಿದೆ.

ಶ್ರೀ ಗೋಪಾಲ ಮಂಕಂದ ಕಾನಡೆ.— ಯಾವಾಗಲೂ ಈ ರೀತಿಯೇ ಹೇಳುತ್ತಾ ಇದ್ದಾರೆ...

(ಗೊಂದಲ)

ಶ್ರೀ ಎಂ. ರಾಮಪ್ಪ.— ಮೊನ್ನೆ ಎರಡು ಸಲ ೩೩೪ ನಿಯಮದ ಮೇರೆಗೆ ಕೇಳಿದ್ದೇನೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ, ನೀವು ಸ್ವಲ್ಪ ಇವರಿಗೆ ಭೀಮಾರಿ ಹಾಕಿ ನಮಗೆ ರಕ್ಷಣೆ ಕೊಡಬೇಕು...

ಉಪಾಧ್ಯಕ್ಷರು.— ತಾವು ಈ ರೀತಿ ಗಲಾಟೆ ಮಾಡಿದರೆ ಹೇಗೆ?

ಶ್ರೀ ಗೋಪಾಲ ಮಂಕಂದ ಕಾನಡೆ.— ಗಲಾಟೆ ಮಾಡುತ್ತಾ ಇಲ್ಲ. ಉತ್ತರ ಕೊಡಿ ಎಂದು ಕೇಳುತ್ತಿದ್ದೇವೆ, ಇಲ್ಲಿ ಸಚಿವರು ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ರಾಮಪ್ಪನವರೇ, ಈಗ ನಿಮ್ಮ ವಿಷಯ ನನ್ನ ಗಮನಕ್ಕೆ ಬಂದಿದೆ. ೩೩೪ರ ಮೇರೆಗೆ ತುಂಗಭದ್ರಾ ಯೋಜನೆಯಿಂದ ಬೆಳೆಗೆ ನೀರು ಒದಗಿಸುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ. ನಾನು ಈ ದಿನ ಸಾಯಂಕಾಲ ಅಧಿಕಾರಿಗಳನ್ನು ಕರೆಯಿಸಿ ಅವರಿಂದ ಉತ್ತರವನ್ನು ತರಿಸಿಕೊಡಿಸುತ್ತೇನೆ.

ನಿಯಮ ೩೩೪ರ ಮೇರೆಗೆ

೧) ಶ್ರೀರಂಗಪಟ್ಟಣ ಬಿದರಹಳ್ಳಿಯಲ್ಲಿ ಹರಿಜನ ಗಿರಿಜನ ಸಮುದಾಯ ಭವನವನ್ನು ನಿರ್ಮಿಸದಿರುವುದು

ಶ್ರೀ ಎಂ. ಶಿವಣ್ಣ.— ಮಾನ್ಯ ಅಧ್ಯಕ್ಷರೇ, ''ಶ್ರೀರಂಗಪಟ್ಟಣ ತಾಲ್ಲೂಕು ಬಿದರಹಳ್ಳಿಯಲ್ಲಿ ಹರಿಜನ-ಗಿರಿಜನರಿಗಾಗಿ ಸಮುದಾಯ ಭವನವೊಂದನ್ನು ನಿರ್ಮಿಸುವ ಬಗ್ಗೆ ಸುಮಾರು ೭-೮ ವರ್ಷಗಳ ಹಿಂದೆ ಸ್ಥಳೀಯರು ಪ್ರಾರಂಭಿಸಿದ್ದುದನ್ನು ಮುಂದುವರಿಸಿ, ಪೂರ್ಣಗೊಳಿಸಲು ಅಂದಿನ ಮಂತ್ರಿಗಳು ಒಪ್ಪಿದ್ದರು, ಕೆಲಸವಾಗದ ಬಗ್ಗೆ ಈಗ್ಗೆ ಎರಡು ವರ್ಷಗಳಿಂದಲೂ ಪ್ರಯತ್ನಿಸಲಾಗಿದೆ. ಕಳೆದ ವರ್ಷ ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಸದರಿ ಸಮುದಾಯ ಭವನವನ್ನು ಮಾಡಿಸಿ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದು, ಇನ್ನೂ ಆ ಕಾರ್ಯ ಆಗಿರುವುದಿಲ್ಲ. ಆದ್ದರಿಂದ ಕೂಡಲೆ ಈ ಕಾರ್ಯವನ್ನು ಮಾಡಿಸಿಕೊಟ್ಟು ಸ್ಥಳೀಯ ಹರಿಜನ-ಗಿರಿಜನರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.— ಮಾನ್ಯ ಸಚಿವರು ಯಾವಾಗಲೂ ಇದೇ ರೀತಿ ಹೇಳುತ್ತಾರೆ. ಆದರೆ ನಮಗೆ ಉತ್ತರವನ್ನು ಕಳುಹಿಸಿಕೊಡುವುದಿಲ್ಲ.

ಉಪಾಧ್ಯಕ್ಷರು.— ಈಗ ಅನೇಕ ಜನ ಮಾನ್ಯ ಮಂತ್ರಿಗಳು ಮಂಲ್ಯನೆಯಲ್ಲಿದ್ದಾರೆ. ಆದ್ದರಿಂದ ಅವರ ಗಮನಕ್ಕೆ ತಂದು ಉತ್ತರಗಳನ್ನು ಸಂಬಂಧಪಟ್ಟ ಮಾನ್ಯ ಸದಸ್ಯರಿಂಗಳಿಗೆ ಕಳುಹಿಸಿಕೊಡಲಾಗುವುದೆಂದು ಅವರು ಹೇಳಿದ್ದಾರೆ.

೨) ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ದೈಹಿಕ ಶಿಕ್ಷಕರ ಬೇಡಿಕೆಗಳು ಹಲವಾರು ವರ್ಷಗಳಿಂದ ಈಡೇರದಿರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ, ರಾಜ್ಯದ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಸಹಸ್ರಾರು ದೈಹಿಕ ಶಿಕ್ಷಣ ಶಿಕ್ಷಕರು ಹಲವಾರು ವರ್ಷಗಳಿಂದ ಕಾರ್ಯ ಮಾಡುತ್ತಾ ಬಂದಿದ್ದು ದುರ್ದೈವದಿಂದ ಈ ನತದೃಷ್ಟ ಜನರ ಬೇಡಿಕೆಗಳು ಈಡೇರಲಾರದೆ ಹಾಗೇ ಉಳಿದುಕೊಂಡಿವೆ. ಇತರ ಶಿಕ್ಷಕರಿಗೆ ಯಾವುದೇ ರೀತಿಯಲ್ಲಿ ಕಡಿವೆಯಿರದ ಈ ಜನರಿಗೆ ತಾರತಮ್ಯ ತೋರಿಸುತ್ತಿರುವುದು ವಿಷಾಧದ ಸಂಗತಿ. ನಮ್ಮ ಮಕ್ಕಳ ಆರೋಗ್ಯವನ್ನು ರೂಪಿಸಬೇಕಾದ ಈ ಜನರು ನಿಜವಾಗಿಯೂ ಕಷ್ಟದಲ್ಲಿದ್ದು ಈವರೆಗೆ ಅವರ ಕೂಗು ಕೇಳಿಸಿಯೇ ಇಲ್ಲ.

೧) ದೈಹಿಕ ಶಿಕ್ಷಣ ವಿಷಯವನ್ನು ಪ್ರಾಥಮಿಕ ಹಂತದಿಂದ ಪೂರ್ವ ತರಗತಿಯವರೆಗೆ ಕಡ್ಡಾಯವಾಗಿರಿಸುವುದು.

೨) ಎಲ್ಲಾ ದೈಹಿಕ ಶಿಕ್ಷಣ ಶಿಕ್ಷಕರಿಗೂ ಇತರ ಶಿಕ್ಷಕರಿಗೆ ದೊರೆಯುವ ವೇತನ, ಸೇವಾ ಹಿರಿತನ ಹಾಗೂ ಇತರ ಸೌಲಭ್ಯ – ಸೌಕರ್ಯಗಳನ್ನು ಕೊಡಬೇಕು.

೩) ಹೊಸ ಹುದ್ದೆಗಳನ್ನು ಸೃಷ್ಟಿಸುವ ಮುಖಾಂತರ ಎಲ್ಲ ದೈಹಿಕ-ಶಿಕ್ಷಕರಿಗೂ ಬಡ್ತಿ ಕಲ್ಪಿಸಿಕೊಡುವುದು.

೪) ಗುತ್ತಿಗೆ ಆಧಾರಿತ ದೈಹಿಕ ಶಿಣ ಶಿಕ್ಷಣೆಕರನ್ನು ಖಾಯಂ ಗೊಳಿಸುವುದು,

೫) ೧೯೭೦ಕ್ಕೂ ಮೊದಲಿದ್ದ ವೇತನ ಶ್ರೇಣಿಯಲ್ಲಿ ಆಗಿರುವ ೧೩೦-೨೧೦ರ ಅನ್ವಯವನ್ನು ಎಲ್ಲಾ ಹಂತದಲ್ಲಿಯೂ ಪರಿಷ್ಕರಿಸುವುದು,

ಈ ಎಲ್ಲ ಬೇಡಿಕೆಗಳ ಈಡೇರಿಕೆಗಾಗಿ ದೈಹಿಕ ಶಿಕ್ಷಣ ಶಿಕ್ಷಕರೆಲ್ಲ ಸಂಘಟಿತರಾಗಿ ಇಂದಿನಿಂದ ಪ್ರತಿಭಟನೆ ಆರಂಭಿಸಿದ್ದು ಅವರ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಸಚಿವರಿಂದ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

ಮಂಗಳೂರಿನಲ್ಲಿ 28-11-1986ರಂದು ನಡೆದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೃಹತ್ ಸಮ್ಮೇಳನ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ),—ಮಾನ್ಯ ಅಧ್ಯಕ್ಷರೇ, ದಿ. ೨೮-೧೧-೮೬ ರಂದು ಮಂಗಳೂರಿನಲ್ಲಿ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೃಹತ್ ಸಮ್ಮೇಳನ ಜರುಗಿತು, ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು ಸಮ್ಮೇಳನಕ್ಕೆ ಆಗಮಿಸಿದರು, ಭಾಷಣ ಮಾಡಿದರು, ಭರವಸೆ ನೀಡಿದರು – 'ಶಿಕ್ಷಕವೃತ್ತಿ ಪವಿತ್ರವಾದುದು, ಸಮಾನವೇತನ ಹಾಗೂ ಸೌಲಭ್ಯಗಳನ್ನು ನೀಡಲೇಬೇಕು, ತಾರತಮ್ಯಕ್ಕೆ ನಾನು ಹಾಗೂ ನಮ್ಮ ಸರ್ಕಾರ ಒಪ್ಪುವುದಿಲ್ಲ, ಈ ಬಗ್ಗೆ ಶೀಘ್ರ ಕಾರ್ಯಪ್ರವೃತ್ತರಾಗುತ್ತೇವೆ' ಈ ಭರವಸೆ ನೀಡಿ ೧೬ ತಿಂಗಳಾಯಿತು. ಏನು ಸುಧಾರಣೆ ಆಗಿದೆ ? ಈಗಿನ ಪರಿಸ್ಥಿತಿಯನ್ನು ಸರ್ಕಾರದ ಮುಂದಿಡಬಯಸುತ್ತೇನೆ.

೧ ಪ್ರತಿ ತಿಂಗಳ ಮೊದಲ ದಿನ ವೇತನ ನೀಡಬೇಕು – ಇದಕ್ಕೆ ಅಲಾಟ್‌ಮೆಂಟ್ ಇಲ್ಲ ಎಂಬ ಉತ್ತರ. ಅಲಾಟ್‌ಮೆಂಟಿಗೆ ತಿಂಗಳುಗಟ್ಟಲೆ ವಿಳಂಬ.